# ವೆಸ್ಟರ್ನ್ ಫುಡ್ ವಾರಕ್ಕೊಮ್ಮೆ..!



ಪತಿ ಜೊನಾಥನ್ ಮತ್ತು ಮಗ ರೆಮಿ ಮೈಮ್ ಜತೆ ಬಾರ್ಬರಾ ಮೈಮ್

ಜಗತ್ತಿನಲ್ಲಿ ಅತ್ಯಂತ ಸುಂದರ ದೇಶ ಯಾವುದು ಎಂಬ ಪ್ರಶ್ನೆಯನ್ನು ಕೇಳಿದರೆ ಬಹುತೇಕ ಜನ ಉತ್ತರಿಸುವುದು ಸ್ವಿಟ್ಜರ್ಲೆಂಡ್ ಎಂದೇ. ಸೌಂದರ್ಯಕ್ಕೆ ಅನ್ವರ್ಥನಾಮವಾಗಿದೆ ಸ್ವಿಟ್ಜರ್ಲೆಂಡ್ ಎಂಬ ಯೂರೋಪ್‌ನ ಹೃದಯಭಾಗದಲ್ಲಿರುವ ದೇಶ. ಪರ್ವತ ಶಿಖರಗಳಿಂದ ಕೂಡಿ, ನದಿ ತೊರೆಗಳಿಂದ ಆವೃತ್ತವಾದ ಈ ದೇಶ ಪ್ರವಾಸಿಗರ ಸ್ವರ್ಗ, ಹವಾಮಾನ ಹಿತಕರ, ಶಾಪಿಂಗ್‌ಗೆ ಅನುಕೂಲಕರ. ಸುಮಾರು 85 ಲಕ್ಷ ಜನಸಂಖ್ಯೆಯಿರುವ ಈ ದೇಶ ನೈರ್ಮಲ್ಯದಲ್ಲಿ ಸದಾ ಮುಂದು. ಚೀಸ್, ಚಾಕೊಲೇಟ್‌ಗಳಿಗೆ ಅತ್ಯಂತ ಹೆಸರುವಾಸಿ.

ಇಷ್ಟೆಲ್ಲ ಅಗ್ಗಳಿಕೆ ಹೊಂದಿದ ದೇಶದಿಂದ ಬೆಂಗಳೂರಿಗೆ ಬಂದ ಬಾರ್ಬರಾ ಮೈಮ್ ಮತ್ತು ಜೊನಾಥನ್ ದಂಪತಿ, 'ಸ್ವಿಟ್ಜರ್ಲೆಂಡ್ ಚಂದದ ದೇಶ; ಬೆಂಗಳೂರು ಎಂಬ 'ಸಿಲಿಕಾನ್ ಸಿಟಿ' ಹೊಂದಿರುವ ಈ ದೇಶ 'ಚಂದಕ್ಕಿಂತ ಚಂದ' ಎನ್ನುತ್ತಿದ್ದಾರೆ.

ಇದಕ್ಕೆ ಕಾರಣ ಏನಿರಬಹುದು? ವೃತ್ತಿಯಲ್ಲಿ ಇಬ್ಬರೂ ಸಾಫ್ಟ್‌ವೇರ್ ಎಂಜಿನಿಯರ್. ಜೊನಾಥನ್ ಮತ್ತು ಬಾರ್ಬರಾ ಮೈಮ್ ಅವರಿಗೆ ಬೆಂಗಳೂರು 'ಚಂದ' ಕಾಣಲು ಕಾರಣ ಇದು ಐಟಿ ಹಬ್, ಸಾಫ್ಟ್‌ವೇರ್ ಉದ್ಯಮಕ್ಕೆ ಅವಕಾಶಗಳು ಹೆಚ್ಚು. ಜತೆಗೆ ತಮ್ಮ ಸ್ವದೇಶಕ್ಕೆ ಹೋಲಿಸಿದರೆ ಜೀವನ ವೆಚ್ಚ ('ಕಾಸ್ಟ್ ಆಫ್ ಲಿವಿಂಗ್') ಬಹಳ ಕಡಿಮೆ. ಇಲ್ಲಿನ ಜನರು ಸ್ನೇಹಜೀವಿಗಳು ಜತೆಗೆ ಪರೋಪಕಾರಿಗಳು ಎಂಬುದನ್ನು ಈ ವಿದೇಶಿ ದಂಪತಿ ಗುರುತಿಸಿದ್ದಾರೆ. ಹೀಗಾಗಿ ಇವರಿಗೆ ಬೆಂಗಳೂರು ಚಂದ ಅನಿಸಿದೆ. ಬೆಂಗಳೂರಿಗೆ ಕಳೆದ ಮೂರು ವರ್ಷ (2011ರಲ್ಲಿ) ಹಿಂದೆ ಬಂದ ಇವರು ಇಲ್ಲಿಯೇ ಖಾಯಂ ಆಗಿ ನೆಲೆ ನಿಲ್ಲಲೂ ನಿರ್ಧರಿಸಿದ್ದಾರೆ. ಈಗಾಗಲೆ ಇಲ್ಲಿನ ಜೀವನಶೈಲಿ, ಆಹಾರ ಪದ್ಧತಿಗಳನ್ನೂ ಒಗ್ಗಿಸಿಕೊಂಡಿದ್ದಾರೆ.

ಬಾರ್ಬರಾ ಅವರ ಪತಿ ಜೊನಾಥನ್ ಮೊಬೈಲ್ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸುವ ಮಿಂಟ್ ಎಂಬ ಕಂಪೆನಿ ನಡೆಸುತ್ತಿದ್ದಾರೆ. ಇಂದಿರಾನಗರದಲ್ಲಿರುವ ಇದೇ ಕಂಪೆನಿಯಲ್ಲಿ ಬಾರ್ಬರಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಆಗಿದ್ದಾರೆ. ಬಾರ್ಬರಾ ಓದಿದ್ದು ಎಂಜಿನಿಯರ್ ಪದವಿ ಜತೆಗೆ ಡಾಕ್ಟರೇಟ್ ಕೂಡ ಮಾಡಿದ್ದಾರೆ.

'ಸ್ವಿಟ್ಜರ್ಲೆಂಡ್ ಬಹಳ ದುಬಾರಿ ದೇಶ. ಆರ್ಥಿಕ ಮಟ್ಟ ಎತ್ತರದಲ್ಲಿದೆ. ಹೀಗಾಗಿ ಇಲ್ಲಿ ಉದ್ಯಮ, ವ್ಯಾಪಾರ ಆರಂಭಿಸುವುದು ಬಹುದೊಡ್ಡ ಸವಾಲು. ಆದರೆ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯಮ ಆರಂಭಿಸಿ ಬಹಳ ಯಶಸ್ಸನ್ನೂ ಗಳಿಸಿದ್ದೇವೆ' ಎನ್ನುತ್ತಾರೆ ಈ ದಂಪತಿ.

'ಭಾರತವನ್ನು ಬಹಳ ಪ್ರೀತಿಸುತ್ತೇವೆ. ಅದರಲ್ಲೂ ದಕ್ಷಿಣ ಭಾರತ ಬಹಳ ಇಷ್ಟ. ಜನ ಯಾವಾಗಲೂ ಆತ್ಮೀಯವಾಗಿ ಮಾತನಾಡಿಸುತ್ತಾರೆ. ಊಟ ತಿಂಡಿಯಂತೂ ಅದ್ಭುತ, ಇಲ್ಲಿನ ಜೀವನ ಶೈಲಿ ಚೆನ್ನಾಗಿದೆ. ಖರ್ಚು ವೆಚ್ಚ ಕೂಡ ನಮ್ಮ ದೇಶಕ್ಕೆ ಹೋಲಿಸಿದರೆ ಬಹಳ ಕಡಿಮೆ. ಹವಾಗುಣ ಚೆನ್ನಾಗಿದೆ. ಬೆಂಗಳೂರು ತಾಂತ್ರಿಕವಾಗಿ ಬಹಳ ಮುಂದುವರಿದಿದೆ' ಎಂದು ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ ಬಾರ್ಬರಾ.

ಧರ್ಮದ ಬಗ್ಗೆ ನಂಬಿಕೆ ಇರುವ ಬಾರ್ಬರಾ ಅವರಿಗೆ ಬೆಂಗಳೂರಿನಲ್ಲಿರುವ ಬಹು ಧರ್ಮೀಯರ ಬಗ್ಗೆ ಅಪಾರ ಕಳಕಳಿ. 'ಐ ಲೈಕ್ ದ ವೇ ಸೋ ಮೆನಿ ರಿಲಿಜಿಯನ್ಸ್ ಕೋ–ಎಕ್ಸಿಸ್ಟ್ ಇನ್ ಬ್ಯಾಂಗಲೂರ್..' ಎನ್ನುವ ಬಾರ್ಬರಾಗೆ ವಿವಿಧ ಧರ್ಮಗಳ ಬಗ್ಗೆ, ಆಚರಣೆ, ಸಂಪ್ರದಾಯಗಳ ಬಗ್ಗೆ ತಿಳಿಯುವ ಕುತೂಹಲವಿದೆ. ಅಲ್ಲದೆ ಇದು ಪುರುಷ ಪ್ರಧಾನ ಸಮಾಜ ಎಂಬುದನ್ನೂ ಅವರು ಗುರುತಿಸಿದ್ದಾರೆ. ಇಲ್ಲಿನ ಮಹಿಳೆಯರಲ್ಲಿ ಈ ಬಗ್ಗೆ ಕೀಳರಿಮೆಯೂ ಇದೆ ಎಂದು ಹೇಳುತ್ತಾರೆ ಬಾರ್ಬರಾ.

'ಇಲ್ಲಿ ಕನ್ನಡ ಮತ್ತು ಹಿಂದಿ ಮಾತನಾಡುವ ಜನರಿದ್ದಾರೆ. ಆದರೆ ಬಹುತೇಕ ಮಂದಿ ಇಂಗ್ಲಿಷ್‌ನಲ್ಲೇ ಮಾತನಾಡುವುದರಿಂದ ಕನ್ನಡ ಅಥವಾ ಹಿಂದಿ ಕಲಿಯುವ ಅವಕಾಶ ಸಿಗಲೇ ಇಲ್ಲ. ನಾನು ದೆಹಲಿಯಲ್ಲಿ ಇರುತ್ತಿದ್ದರೆ ಖಂಡಿತಾ ಹಿಂದಿ ಕಲಿಯುತ್ತಿದ್ದೆ. ಕನ್ನಡ ನಾಡು ಇದಾದರೂ ಕನ್ನಡ ಮಾತನಾಡುವ ಜನ ಕಡಿಮೆ' ಎನ್ನುತ್ತಾರೆ ಇವರು.

ಈಗಾಗಲೇ ರಾಜಸ್ತಾನ, ಆಗ್ರಾ, ಚೆನ್ನೈ, ಗೋವಾ, ಕೇರಳದ ತಿರುವನಂತಪುರ, ಕೊಚ್ಚಿ, ಮುನ್ನಾರ್, ಅಲೆಪ್ಪಿ ಮುಂತಾದ ಕಡೆ ಪ್ರವಾಸ ಹೋಗಿ ಬಂದಿದ್ದೇವೆ. ಕರ್ನಾಟಕದಲ್ಲಿ ಬೇಲೂರು, ಹಂಪಿ, ನಂದಿ ಬೆಟ್ಟ, ಚಿಕ್ಕಮಗಳೂರು ಮುಂತಾದ ಜಾಗಗಳನ್ನು ಸಂದರ್ಶಿಸಿದ್ದೇವೆ. ಎಲ್ಲ ಜಾಗಗಳೂ ಬಹಳ ಸುಂದರವಾಗಿವೆ. ಕರ್ನಾಟಕ, ಭಾರತದ ಬಹುತೇಕ ತಾಣಗಳೂ ಬಹಳ ಚೆನ್ನಾಗಿವೆ' ಎಂದು ಕಣ್ಣರಳಿಸುತ್ತಾರೆ.

'ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಸುತ್ತುವುದು ನಮಗಿಷ್ಟ. ಗಂಡ, ಮಗುವಿನ ಜತೆ ವಾರಾಂತ್ಯದಲ್ಲಿ ವಾಕ್ ಮಾಡುತ್ತೇವೆ. ಮಾಲ್‌ಗಳಿಗೆ ಹೋಗಿ ಸುತ್ತಾಡುತ್ತೇವೆ. ಭಾರತಕ್ಕೆ ಬಂದ ಮೇಲೆ ಇಲ್ಲಿನ ವಿವಿಧ ಊಟ ತಿಂಡಿ ರುಚಿ ನೋಡಿದೆವು. ಪಾಶ್ಚಾತ್ಯ ಅಡುಗೆ ವಾರಕ್ಕೊಮ್ಮೆ ಅಷ್ಟೇ ತಿನ್ನುವುದು, ಶೇ.90ರಷ್ಟು ಭಾರತೀಯ ಅಡುಗೆಗಳೇ ನಮಗೆ ಇಷ್ಟ. ಹಬ್ಬದ ಆಚರಣೆ ಬಗ್ಗೆ ಕುತೂಹಲವಿದೆ. ಇನ್ನೊಂದು ವಾರಕ್ಕೆ ಬರುವ ದೀಪಾವಳಿಯನ್ನೇ ಎದುರು ನೋಡುತ್ತಿದ್ದೇವೆ. ದೀಪಾವಳಿ ಹಬ್ಬ ಇಲ್ಲಿಯವರ ಹಾಗೇ ಆಚರಿಸಬೇಕು ಎಂದು ನಿರ್ಧರಿಸಿದ್ದೇವೆ' ಎನ್ನುವ ಬಾರ್ಬರಾ ಮೈಮ್‌ಗೆ ರೆಮಿ ಮೈಮ್ ಎಂಬ ಏಳು ತಿಂಗಳ ಮಗ ಇದ್ದಾನೆ. ಈತ ಬೆಂಗಳೂರಿನಲ್ಲೇ ಜನಿಸಿದ್ದು ಭಾರತೀಯ ಪ್ರಜೆಯೇ ಆಗಿದ್ದಾನೆ.

■ ಅವನೀಶ್